# ಕಣ್ಣಲ್ಲಿ ನೀರು

ಮನಸಲ್ಲಿ ಆನಂದ ಕಣ್ಣಲ್ಲಿ ನೀರು
ಎದೆ ತುಂಬ ಗಾಯ ಕಣ್ಣಲ್ಲಿ ನೀರು

ಬರುವ ಭರವಸೆಯ ಮಳೆ ಹೋಗಿ
ಬಿತ್ತದ ಹೊಲ ಕಂಡು ಕಣ್ಣಲ್ಲಿ ನೀರು

ಬೇಟೆ ಮೋಜಿಗೆ ಬಲಿಯಾದ ತಾಯಿ
ಅನಾಥ ಜಿಂಕೆಮರಿ ಕಣ್ಣಲ್ಲಿ ನೀರು

ಕಳ್ಳ ದಾಳಿಗೆ ಮರಣವಪ್ಪಿದ ಯೋಧ
ಸಂತಾಪದಲಿ ದೇಶದ ಕಣ್ಣಲ್ಲಿ ನೀರು

ತಾ ಸೃಜಿತ ಲೋಕದಲಿ ಸಮತೆ ಕಾಣಲು
ಹೆಣಗಿ ದಣಿದ ದೇವರ ಕಣ್ಣಲ್ಲು ನೀರು





# ಹೇಗೆ ಪ್ರಿಯೆ?

ಆ ದಿನದ ಹಾಗೆ ಈ ದಿನವು ಕೂಡ
ಬಾರದೆ ಹೋದರೆ ಹೇಗೆ ಪ್ರಿಯೆ?

ಕಾಲ ಮೀರಿಯೂ ಮಳೆ ಬೇಕಿರಲು
ಇಳೆಗೆ ಬೇಸಗೆಯೆ ಉಳಿದರೆ ಹೇಗೆ ಪ್ರಿಯೆ?

ಬಾಯಾರಿ ನೆಲ ಬಳಲುತಿರಲು
ಹೂದೋಟ ನಗುವುದು ಹೇಗೆ ಪ್ರಿಯೆ?

ಬಿಸಿಲಲ್ಲಿ ಬಿಸಿಲು ಬೇಯುತಲಿರಲು
ಚಿಗಿತು ಮರ ನೆರಳಾಡುವುದು ಹೇಗೆ ಪ್ರಿಯೆ?

ಮಳೆಬಂದು ಹೂಬನವು ನಗುತಿರಲು
ಚಂದಿರನೆ ಬಾರದಿರೆ ಹೇಗೆ ಪ್ರಿಯೆ?

ಮಧುಕೊಡದೆ ಕದ ಮುಚ್ಚಿದಂತೆ ಮೈಕದ
ನೀನು ಬಾರೆಯಾದರೆ ಹೇಗೆ ಪ್ರಿಯೆ?